**ದಿನಾಂಕಃ16.12.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು**

**<u>ಪಾಟೀ ಸವಾಲುಃ ವಾದಿಯ ಪರ ಶ್ರೀ ಡಿ ಸಿ ವಕೀಲರಿಂದಃ-</u>**

ನಾನು ದ್ವಿತೀಯ ಪಿಯುಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. 1 ರಿಂದ 17 ನೇ ವಾದಿಗಳ ಪರಿಚಯವಿದೆ. ವಾದಿಗಳು ವಿಭಾಗ ಕೋರಿ ಈ ದಾವೆ ಹಾಕಿರುತ್ತಾರೆ. ವಾದಿಗಳು ಸರ್ವೆ ನಂ.221/1 ರಲ್ಲಿ ಖರಾಬು ಸೇರಿ 3 ಎಕರೆ 24 ಗುಂಟೆ, 221/4 ರಲ್ಲಿ 3 ಎಕರೆ 3 ಗುಂಟೆ ಜಮೀನಿನಲ್ಲಿ ವಿಭಾಗ ಕೋರಿ ದಾವೆ ಹಾಕಿರುತ್ತಾರೆ. ದಾವಾ ಸ್ವತ್ತುಗಳನ್ನು ನನ್ನ ಅಜ್ಜ ಸೈಯದ್ ಜಾಫರ್ ಖರೀದಿ ಮಾಡಿರುತ್ತಾರೆ. ನನ್ನ ಅಜ್ಜ ಸೈಯದ್ ಜಾಫರ್ ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ವಾದಿ ಈ ದಾವೆಯಲ್ಲಿ ಯಾವ ಯಾವ ದಾಖಲೆ ಹಾಜರುಪಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಅಜ್ಜ ಸೈಯದ್ ಜಾಫರ್ ರವರು ಯಾವ ವರ್ಷದಲ್ಲಿ ಆಸ್ತಿ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನಿಪಿ 10 ರ ಪ್ರಕಾರ ನನ್ನ ಅಜ್ಜ ಸೈಯದ್ ಜಾಫರ್ ರವರ ತಂದೆಯ ಹೆಸರು ಸೈಯದ್ ಮುರ್ತಜಃ ಎಂದರೆ ಸರಿ. ನನ್ನ ತಂದೆಯ ಹೆಸರು ಸಹಃ ಸೈಯದ್ ಮುರ್ತಜಃ ಎಂದರೆ ಸರಿ. ನನ್ನ ತಂದೆಯ ತಂದೆಯ ಹೆಸರು ಸೈಯದ್ ಬಶೀರ್. ನನ್ನ ಅಜ್ಜ ಸೈಯದ್ ಜಾಫರ್ ರವರಿಗೆ ಒಂದು ಗಂಡು ಒಂದು ಹೆಣ್ಣು ಮಕ್ಕಳು, ಅವರುಗಳೆಂದರೆ ಸೈಯದ್ ಅನ್ವರ್ ಮತ್ತು ನನ್ನ ತಾಯಿ ಅಸ್‌ಮತ್-ಉನ್ನಿಸಾ (ಈ ದಾವೆಯ ಪ್ರತಿವಾದಿ) ರವರಾಗಿರುತ್ತಾರೆ ಎಂದರೆ ಸರಿ. ನನ್ನ ತಂದೆ ಸೈಯದ್ ಮುರ್ತಜಃ ರವರ ಮೂಲ ಊರು ಶಿವಮೊಗ್ಗ. ನನ್ನ ತಂದೆ ಸೈಯದ್ ಮುರ್ತಜಃ ರವರಿಗೆ ಒಟ್ಟು 4 ಜನ ಅಣ್ಣ-ತಮ್ಮಂದಿರು, ಅವರುಗಳೆಂದರೆ ಮೊದಲಿಗೆ ನನ್ನ ತಂದೆ ಸೈಯದ್ ಮುರ್ತಜಃ, ಸೈಯದ್ ಖಲೀಲ್, ಸೈಯದ್ ರೆಹಮನ್, ಸೈಯದ್ ಇಲಿಯಾಜ್ ರವರಾಗಿರುತ್ತಾರೆ ಹಾಗೂ 5 ಜನ ಹೆಣ್ಣು ಮಕ್ಕಳು ಇರುತ್ತಾರೆ.

ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ನನ್ನ ತಾಯಿ (ಪ್ರತಿವಾದಿ) ರವರು ಈಗ ಜೋಡಿಹೋಚಿಹಳ್ಳಿಯಲ್ಲಿ ಇದ್ದಾರೆ. ಅವರ ಆರೋಗ್ಯ ಚೆನ್ನಾಗಿ ಇಲ್ಲ, ವಯಸ್ಸಾಗಿರುವುದರಿಂದ ಅವರಿಗೆ ಕಣ್ಣು ಕಾಣುವುದಿಲ್ಲ.

ನನ್ನ ತಾಯಿಯವರು ನನಗೆ ನೀಡಿದ ನಿಡಿ 10 ಎಸ್ ಪಿ ಎ ದಾಖಲೆಯನ್ನು ಕಡೂರಿನಲ್ಲಿ ಮಾಡಿಸಿಕೊಟ್ಟಿರುತ್ತಾರೆ. ನಿಡಿ 10 ಎಸ್ ಪಿ ಎ ಅನ್ನು ಬರೆದುಕೊಟ್ಟ ನಂತರ ಈ ದಾವೆಯ ವಿಚಾರವನ್ನು ಮತ್ತು ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ನಾನು ವಕೀಲರ ಮೂಲಕ ನಿಖರವಾಗಿ ತಿಳಿದುಕೊಂಡಿರುವುದಿಲ್ಲ.

ನನ್ನ ಅಜ್ಜ ಸೈಯದ್ ಜಾಫರ್ ರವರಿಗೆ ನನ್ನ ತಂದೆ ಅಳಿಯನಾಗಬೇಕು ಎಂದರೆ ಸರಿ. 1 ನೇ ವಾದಿ ನಮ್ಮ ಬಳಿ ಬಂದು ದಾವಾ ಆಸ್ತಿಯನ್ನು ವಿಭಾಗ ಮಾಡಿಕೊಳ್ಳೋಣ ಎಂದು ಕೇಳಿರುತ್ತಾರೆ ಎಂದರೆ ಸರಿ. ಆ ಸಂದರ್ಭದಲ್ಲಿ ನನ್ನ ತಾಯಿ (ಪ್ರತಿವಾದಿ) ಯಾವುದೇ ಆಸ್ತಿ ವಿಭಾಗ ಮೂಲಕ ಕೊಡಬೇಕಾಗಿಲ್ಲ ಎಂದು ಹೇಳಿದ್ದಕ್ಕೆ ವಾದಿಯು ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನಾವು ಮೊದಲಿಗೆ ಅವರಿಗೆ ವಿಭಾಗ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಮೊದಲಿಗೆ ದಾವಾ ಆಸ್ತಿಯ ಖಾತೆಯು ನನ್ನ ತಂದೆ ಮತ್ತು ನನ್ನ ಮಾವ ಸೈಯದ್ ಅನ್ವರ್ ರವರ ಹೆಸರಿನಲ್ಲಿ ಜಂಟಿಯಾಗಿ ಇತ್ತು, ನಂತರ ನನ್ನ ಮಾವ ಸೈಯದ್ ಅನ್ವರ್ ರವರು ನನ್ನ ಅಜ್ಜನ ಮರಣದ ನಂತರ ವಿಭಾಗ ಮಾಡಿ ನನ್ನ ತಾಯಿಗೆ ವಿಭಾಗದಲ್ಲಿ ಆಸ್ತಿಯನ್ನು ಕೊಟ್ಟಿರುತ್ತಾರೆ. ಸದರಿ ವಿಭಾಗವು ನೋಂದಣಿಯ ಮೂಲಕ ಆಗಿರುತ್ತದೆಯೇ ಅಥವಾ ಯಾವ ರೀತಿ ವಿಭಾಗವಾಗಿರುತ್ತದೆ ಎಂದರೆ ಸಾಕ್ಷಿಯು ಊರಿನ ಪಂಚಾಯಿತಿದಾರರ ಎದುರುಗಡೆ ಮೌಖಿಕವಾಗಿ ವಿಭಾಗವಾಗಿರುತ್ತದೆ ಅದು ಸಾದಾ ಹಾಳೆಯಲ್ಲಿ ಬರವಣಿಗೆಯಾಗಿರುತ್ತದೆ ಎಂದು ನುಡಿಯುತ್ತಾರೆ.

ಸದರಿ ಸಾದಾ ಹಾಳೆಯಲ್ಲಿ ಆದ ಬರವಣಿಗೆಯ ವಿಭಾಗವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಸದರಿ ಪತ್ರ ನಿ ಡಿ 2 ಆಗಿರುತ್ತದೆ ಎಂದು ತೋರಿಸಿರುತ್ತಾರೆ. ನಿ ಡಿ 2 ರಲ್ಲಿ ಸರ್ಕಾರಕ್ಕೆ ಎಂಬುದಾಗಿ ಬರೆದಿದೆ ಎಂದರೆ ಸರಿ. ನಿ ಡಿ 2 ರ ದಾಖಲೆಯು ವಿಭಾಗ ಪತ್ರವಲ್ಲ ಎಂದರೆ ಸರಿಯಲ್ಲ. ನಿ ಡಿ 2 ರ ದಾಖಲೆಯನ್ನು ಸೈಯದ್ ಅನ್ವರ್ ರವರು ಯಾವತ್ತು ಬರೆದುಕೊಟ್ಟಿಲ್ಲ ಹಾಗೂ ನಿ ಡಿ 2 ಸೈಯದ್ ಅನ್ವರ್ ರವರಿಗೆ ಸೇರಿದ ದಾಖಲೆಯಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿ ಡಿ 2 ನ್ನು ತೋರಿಸಿ ಅದರಲ್ಲಿ ಯಾವುದೇ ದಿನಾಂಕ ಅಥವಾ ತಿಂಗಳು ಅಥವಾ ವರ್ಷವನ್ನು ನಮೂದು ಮಾಡಿಲ್ಲ ಎಂದು ಕೇಳಿದ್ದು, ಅದಕ್ಕೆ ಸಾಕ್ಷಿಯು ಸರಿ ಎಂದು ಒಪ್ಪಿಕೊಂಡಿರುತ್ತಾರೆ. ನಿ ಡಿ 2(ಎ) ಸಹಿಯು ಸೈಯದ್ ಅನ್ವರ್ ರವರ ಸಹಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿ ಡಿ 2 ಈ ದಾವೆ ಹಾಕಿದ ನಂತರ ನಾನು ಮತ್ತು ಪ್ರತಿವಾದಿ (ನನ್ನ ತಾಯಿ) ಸೇರಿಕೊಂಡು ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ.

ನನ್ನ ಅಜ್ಜನ ತಂದೆಯ ಹೆಸರು ಕೇಳುವ ಅವಶ್ಯಕತೆ ನನಗೆ ಬಂದಿಲ್ಲ, ಆ ಕಾರಣ ನಾನು ನನ್ನ ತಾಯಿಯ ಬಳಿ ಕೇಳಿರುವುದಿಲ್ಲ. ನನ್ನ ತಾಯಿ ಪ್ರತಿವಾದ ಪತ್ರದ 4 ನೇ ಪ್ಯಾರಾದ 5 ನೇ ಸಾಲಿನಲ್ಲಿ ನನ್ನ ತಂದೆ ಸೈಯದ್ ಜಾಫರ್ ರವರ ತಂದೆಯ ಹೆಸರು ಸೈಯದ್ ಮುರ್ತಜಃ ಆಗಿರುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಾಯಿಯ ಗಂಡನ ಹೆಸರು ಸಹಃ ಮುರ್ತಜಃ ಎಂದಾಗಿರುವುದರಿಂದ ಆ ರೀತಿ ಹೇಳಿರಬಹುದು ಎಂದು ನುಡಿಯುತ್ತಾರೆ.

ನಿಪಿ 10 ರಲ್ಲಿ ಸೈಯದ್ ಜಾಫರ್ ರವರ ತಂದೆಯ ಹೆಸರು ಸೈಯದ್ ಮುರ್ತಜಃ ಎಂದು ನಮೂದಾಗಿದ್ದರೂ ಸಹಃ ಸೈಯದ್ ಮುರ್ತಜಃ ರವರು ಅವರ ತಂದೆಯ ತಂದೆಯಲ್ಲ ಎಂದು ಸುಳ್ಳು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಸೈಯದ್ ಅನ್ವರ್ ರವರ ಸಹೋದರನಾಗಿರುವುದಿಲ್ಲ ಹಾಗಾಗಿ

ವಿಭಾಗವನ್ನು ಮಾಡಿಕೊಳ್ಳುವ ಸಂಭವ ಉದ್ಭವಿಸುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಾಯಿಯ ಮದುವೆ ಮಾಡುವಾಗ ನನ್ನ ತಂದೆಯನ್ನು ಮನೆಯ ಅಳಿಯ ಎಂಬುದಾಗಿ ಮಾಡಿಕೊಂಡು ಅವರಿಗೆ ವಿಭಾಗ ಕೊಡುತ್ತೇವೆ ಎಂದು ಹೇಳಿ ಮದುವೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿಯ ಮದುವೆಯ ಸಮಯದಲ್ಲಿ ನಾನು ಮೇಲೆ ಹೇಳಿದ ವಿಚಾರ ಬರವಣಿಗೆ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಈ ದಾವೆಗೋಸ್ಕರ ಪಾಲು ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆರವರು INH47/1967-68 ರಂತೆ ಕಾಂದಾಯ ಇಲಾಖೆಯವರೊಂದಿಗೆ ಷರೀಕ್ಕಾಗಿ ಸುಳ್ಳು ಮಾಹಿತಿ ನೀಡಿ ದಾಖಲೆಗಳನ್ನು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನ್ನ ತಂದೆಗೆ ಯಾವುದೇ ಹಕ್ಕು ಅಧಿಕಾರ ಹಿಂದೆಯೂ ಇರಲಿಲ್ಲ ಈಗಲೂ ಸಹಃ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನಲ್ಲಿ ಮೊಹಮ್ಮದಿಯ ಕಾನೂನಿನ ಪ್ರಕಾರ ನನ್ನ ತಾಯಿ ಕೇವಲ 1 ಭಾಗ ಪಡೆದುಕೊಳ್ಳುವ ಹಕ್ಕು ಹೊಂದಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿಗೆ ಇದ್ದ ಆಸ್ತಿ ನನ್ನ ತಾಯಿಯ ಹೆಸರಿಗೆ ಬಂದಿರುತ್ತದೆ.

ನಿಪಿ 7 ರ ಪ್ರಕಾರ ನನ್ನ ತಂದೆಗೆ ಪೌತಿ ಮೇರೆಗೆ ಆಸ್ತಿ ಬಂದಿರುತ್ತದೆ ಎಂದು ದಾಖಲು ಇದೆ ಎಂದರೆ ಸರಿಯಲ್ಲ. ನನ್ನ ತಂದೆಯವರಿಗೆ ವಿಭಾಗದ ಮೂಲಕ ಅಥವಾ ಅವರು ಖರೀದಿ ಮಾಡಿದ್ದೇ ಆಗಿದ್ದಲ್ಲಿ ಎಂ ಆರ್ ನಲ್ಲಿ ವಿಭಾಗ ಅಥವಾ ಕ್ರಯ ಎಂದು ಬರುತ್ತಿತ್ತು ಆದರೆ ಅಲ್ಲಿ ಪೌತಿ ಎಂದು ನಮೂದಾಗಿರುವುದರಿಂದ ನನ್ನ ತಂದೆ ಕಂದಾಯ ಅಧಿಕಾರಿಗೆ ಸುಳ್ಳು ಮಾಹಿತಿ ನೀಡಿ ಸೈಯದ್ ಅನ್ವರ್ ರವರು ಬದುಕಿದ್ದಾಗ ಪೌತಿ ಎಂದು ಸುಳ್ಳು ದಾಖಲೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ 7 ರಲ್ಲಿ ಪೌತಿ ಎಂದು ನಮೂದಾಗಿದ್ದು, ನಿ ಡಿ 12 ರಲ್ಲಿ ಹೇಳಿಕೆ ನೀಡಿ ಖಾತೆ ಬದಲಾವಣೆ ಮಾಡಿರುತ್ತಾರೆ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಯಾವುದೇ ಆಕ್ಷೇಪಣೆ ಇಲ್ಲ ಎಂದು ಖಾತೆ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಡಿ 12 ರ ದಾಖಲೆ ಆಗುವ ಸಮಯದಲ್ಲಿ ನನ್ನ ಮಾವ ಬದುಕಿದ್ದರು ಎಂದರೆ ಸರಿ. ನಿಪಿ 7 ರ ದಾಖಲೆ ಆಗುವ ಸಮಯದಲ್ಲಿಯೂ ಸಹಃ ಸೈಯದ್ ಅನ್ವರ್ ರವರು ಬದುಕಿದ್ದರು ಎಂದರೆ ಸರಿ. ನಿಡಿ 12 ಮತ್ತು ನಿಪಿ 7 ರ ದಾಖಲೆಗಳನ್ನು ನನ್ನ ತಂದೆ ಆಸ್ತಿ ಲಪಟಾಯಿಸುವ ಉದ್ದೇಶದಿಂದ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಂದೆ ಸುಮಾರು 25 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ. ನಿ ಡಿ 13 ರ ಪ್ರಕಾರ ನನ್ನ ತಂದೆ ದಿಃ 25.10.1996 ರಂದು ಮೃತಪಟ್ಟಿರುತ್ತಾರೆ ಎಂದು ನಮೂದು ಇದೆ ಎಂದರೆ ಸರಿ. ದಿಃ 25.10.1996 ರಂದು ನನ್ನ ಮಾವ ಸೈಯದ್ ಅನ್ವರ್ ಬದುಕಿದ್ದರು ಎಂದರೆ ಸರಿ. 1996 ರಲ್ಲಿ ನನಗೆ 20 ವರ್ಷ ವಯಸ್ಸಾಗಿತ್ತು. ಖಾತೆ ಆಗಿರುವ ವಿಚಾರ ಆ ಸಮಯದಲ್ಲಿ ನನಗೆ ಗೊತಿತ್ತು. ನಿ ಡಿ 13 ದಾಖಲೆ ಮಾಡಿಸಿಕೊಳ್ಳುವಾಗ ನಾವು ನನ್ನ ಮಾವ ಸೈಯದ್ ಅನ್ವರ್ ರವರಿಗೆ ಮಾಹಿತಿ ನೀಡಿಲ್ಲ ಎಂದರೆ ಸರಿ. ನಿಡಿ 13ನ್ನು ವಾದಿಗಳಿಗೆ ಮೋಸ ಮಾಡಲು ನಾನು, ನನ್ನ ತಾಯಿ ಸೇರಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ನನ್ನ ತಾಯಿ ಪ್ರತಿವಾದಿ ಪತ್ರದಲ್ಲಿ ಮತ್ತು ವಕಾಲತ್ತಿನಲ್ಲಿ ಅವರ ಸಹಿ ಮತ್ತು ಹೆಬ್ಬೆಟ್ಟಿನ ಗುರುತು ಎರಡನ್ನು ಹಾಕಿರುತ್ತಾರೆ. ನನ್ನ ತಾಯಿ ಪ್ರತಿವಾದ ಪತ್ರ ಮತ್ತು ವಕಾಲತ್ತಿನಲ್ಲಿ ಸಹಿ ಮಾತ್ರ ಮಾಡಿದ್ದರು ಸಹಃ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ನನ್ನ ತಾಯಿ ಕೆಲವೊಂದು ಕಡೆ ಸಹಿ ಮಾಡುತ್ತಾರೆ ಮತ್ತು ಕೆಲವೋಂದು ಕಡೆ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

ನಿ ಡಿ 10ನ್ನು ನಾನು ನನ್ನ ತಾಯಿ ನ್ಯಾಯಾಲಯಕ್ಕೆ ಬರದಂತೆ ನೋಡಿಕೊಳ್ಳಲು ಸೃಷ್ಟಿಸಿರುತ್ತೇನೆ ಎಂದರೆ ಸಾಕ್ಷಿಯು ನನ್ನ ತಾಯಿಗೆ ಸುಮಾರು 96 ವರ್ಷ ವಾಗಿರುವುದರಿಂದ ಅವರು ಬರಲಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ 10 ರಲ್ಲಿ ನನ್ನ ತಾಯಿ ಮೊದಲಿಗೆ ಸಹಿ ಮಾಡುತ್ತಿದ್ದರು ಈಗ ಹೆಬ್ಬೆಟ್ಟಿನ ಗುರುತು ಹಾಕುತ್ತಿದ್ದಾರೆ ಎಂದು ಎಲ್ಲಿಯೂ ನಮೂದು ಮಾಡಿಲ್ಲ ಎಂದರೆ ಸರಿ. ನಿ ಡಿ 11 ರ ದಾಖಲೆಯನ್ನು ನನ್ನ ತಂದೆ ಕಂದಾಯ ಇಲಾಖೆಯವರ ಜೊತೆ ಷರಿಕ್ಕಾಗಿ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ.

ನಿಡಿ 1 (ನೋಟೀಸ್ ಹಿಂಬರಹ) ದಾಖಲೆಯನ್ನು ಅಧಿಕಾರಿಗಳು ನನ್ನ ತಂದೆಯ ಹೆಸರಿಗೆ ಬರೆದಿರುತ್ತಾರೆ. ನಿ ಡಿ 3 ರ ದಾಖಲೆಯನ್ನು ಇಸ್ರತ್ ಎಂಬುವವರು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಇಸ್ರತ್ ರವರಿಗೆ ಓದಲು ಬರೆಯಲು ಬರುವುದಿಲ್ಲ, ಅವರು ನಿಡಿ3 ರಂತೆ ಟೈಪ್ ಮಾಡಿಸಿ ಯಾರಿಗೂ ಸಹಃ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿ ಡಿ 4 ಹಣ ಸಂದ ರಶೀದಿ ಎಂದು ಬರೆದಿರುವ ದಾಖಲೆಯು ಸೈಯದ್ ಅನ್ವರ್ ಮತ್ತು ಅವರ ಕುಟುಂಬದವರಿಗೆ ಸಂಬಂಧಪಟ್ಟ ದಾಖಲೆಯಾಗಿರುವುದಿಲ್ಲ, ಅವರು ಈ ರೀತಿ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 4 ಎ ಸೈಯದ್ಅನ್ವರ್ ರವರ ಸಹಿ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನಿ ಡಿ 5 ಪತ್ರವು ಸೈಯದ್ಅನ್ವರ್ ಮತ್ತು ಅವರ ಕುಟುಂಬದವರಿಗೆ ಸಂಬಂಧಪಟ್ಟ ದಾಖಲೆಯಾಗಿರುವುದಿಲ್ಲ, ಅವರು ಈ ರೀತಿ ಯಾವುದೇ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ 5ಎ ಸೈಯದ್ಅನ್ವರ್ ರವರ ಸಹಿ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನಿ ಡಿ 6 ದಾಖಲೆಯನ್ನು ಈ ದಾವೆಗೆಂದು ನಾನು ಮತ್ತು ನನ್ನ ಸಾಯಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿ ಡಿ 2 ರ ದಾಖಲೆಯು ನಮ್ಮ ಮನೆಯಲ್ಲಿ ಇತ್ತು. ನಿ ಡಿ 2 ಸರ್ಕಾರಕ್ಕೆ ಎಂದು ಬರೆದಿರುವ ದಾಖಲೆಯಾಗಿದ್ದು ಸದರಿ ದಾಖಲೆಯನ್ನು ನಾವು ಸರ್ಕಾರಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ನಾವು ಸರ್ಕಾರದವರಿಗೆ ತೋರಿಸಿರುತ್ತೇವೆ ಎಂದು ನುಡಿಯುತ್ತಾರೆ. ನಿ ಡಿ 2 ನ್ನು ಈಗ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.